ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

1, 2) ಬೀದರ್ ನಗರದಲ್ಲಿ ನಿರಾಶ್ರಿತರು ಪರಿಹಾರ ಕೇಂದ್ರವನ್ನು ಇದುವರೆವಿಗೂ ಪ್ರಾರಂಭಿಸಿರುವುದಿಲ್ಲ. ಇಲ್ಲಿ ನಿರಾಶ್ರಿತರ ಪರಿಹಾರ ಕೇಂದ್ರವನ್ನು ಪ್ರಾರಂಭಿಸುವ ಬಗ್ಗೆ ಜಿಲ್ಲಾಧಿಕಾರಿಗಳಿಂದ ವರದಿ ಪಡೆದು ಪರಿಶೀಲಿಸಲಾಗುವುದು.

4643 (5479) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) :– ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಎಷ್ಟು ಪಶುವೈದ್ಯ ಆಸ್ಪತ್ರೆಗಳಿವೆ; ಎಷ್ಟು ಜನ ಪಶುವೈದ್ಯರಿದ್ದಾರೆ; ಈ ಪಶುವೈದ್ಯ ಕೇಂದ್ರಗಳನ್ನು ಸ್ಥಳಾಂತರಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಹಾಗಿದ್ದಲ್ಲಿ ಸ್ಥಳಾಂತರಿಸಲು ಕಾರಣವೇನು; (ಪೂರ್ಣ ವಿವರ ನೀಡುವುದು)?

ಶ್ರೀ ಮೆರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ಕೊಡಗು ಜಿಲ್ಲೆಯಲ್ಲಿ ಒಟ್ಟು 77 ವಿವಿಧ ಪಶುವೈದ್ಯಕೀಯ ಸಂಸ್ಥೆಗಳು ಇರುತ್ತವೆ. ಇವುಗಳ ವಿವರ ಕೆಳಕಂಡಂತಿದೆ :–

ಪಶು ಆಸ್ಪತ್ರೆ	6
ಪಶು ಚಿಕಿತ್ಸಾಲಯ	25
ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	22
ಸಂಚಾರಿ ಪಶು ಚಿಕಿತ್ಸಾಲಯ	3
ಪ್ರಧಾನ ಗ್ರಾಮೀಣ ಯೋಜನೆ	3
ಪ್ರಧಾನ ಗ್ರಾಮೀಣ ಉಪ ಕೇಂದ್ರ	18
ಒಟ್ಟು	**77**

ಜಿಲ್ಲೆಯಲ್ಲಿ 24 ಪಶುವೈದ್ಯಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

2003ರ ಜಾನುವಾರು ಗಣತಿ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 1,56,047 ಜಾನುವಾರು ಘಟಕಗಳಿದ್ದು, ಇವುಗಳಿಗೆ ಒಟ್ಟು 31 ಪಶುವೈದ್ಯಕೀಯ ಸಂಸ್ಥೆಗಳ ಅವಶ್ಯಕತೆಯಿರುತ್ತದೆ. ಈ ಜಿಲ್ಲೆಯಲ್ಲಿ ಅಗತ್ಯಕ್ಕಿಂತ ಹೆಚ್ಚುವರಿ ಪಶುವೈದ್ಯಕೀಯ ಸಂಸ್ಥೆಗಳು ಇರುತ್ತವೆ.

ಡಾ॥ ಡಿ.ಎಂ. ನಂಜುಂಡಪ್ಪ ನವರ ಪ್ರಾದೇಶಿಕ ಅಸಮತೋಲನ ವರದಿಯ ಶಿಫಾರಸ್ಸಿನಂತೆ ಅಗತ್ಯಕ್ಕಿಂತ ಹೆಚ್ಚು ಪಶುವೈದ್ಯಕೀಯ ಸಂಸ್ಥೆಗಳು ಇರುವ ಜಿಲ್ಲೆಗಳಿಂದ, ಕೊರತೆಯಿರುವ ಜಿಲ್ಲೆಗಳಿಗೆ ಸ್ಥಳಾಂತರಿಸಿ ಅಸಮತೋಲನ ನಿವಾರಿಸಲು ಶಿಫಾರಸ್ಸು ಇದೆ. ಹೆಚ್ಚುವರಿ ಸಂಸ್ಥೆಗಳನ್ನು ಸ್ಥಳಾಂತರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.